ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 10–4–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಚಾಲನೆ:<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು.<br><br>ಉಪಸ್ಥಿತಿ:<br><br>ಶ್ರೀ ಹೆಚ್. ಕಾಂತರಾಜು,<br>ಅಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು.<br><br>ಸಂಪರ್ಕ:<br><br>ಸಾರ್ವಜನಿಕ ಸಂಪರ್ಕಾಧಿಕಾರಿ,<br>ಬಿ.ಬಿ.ಎಂ.ಪಿ. ಬೆಂಗಳೂರು | **11-04-2015**<br>ಶನಿವಾರ<br>ಬೆಳಿಗ್ಗೆ<br>11–00 ಗಂಟೆಗೆ | ಬಿ.ಬಿ.ಎಂ.ಪಿ. ವಾರ್ಡ್ ಕಚೇರಿ ವಾರ್ಡ್ ನಂ 151, 17ನೇ 'ಎ' ಮುಖ್ಯರಸ್ತೆ, 2ನೇ ಕ್ರಾಸ್, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560 095 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಕೋಳಿ ಸಾಕಾಣಿಕಾ ತರಬೇತಿ

ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)

ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟದಲ್ಲಿ ಪಶುಪಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ಏಪ್ರಿಲ್ 22 ರಿಂದ 28 ರವರೆಗೆ ಕೋಳಿ ಸಾಕಾಣಿಕಾ ತರಬೇತಿಯನ್ನು ಹಮ್ಮಿಕೊಂಡಿದೆ.

ಆಸಕ್ತಿಯುಳ್ಳವರು ತರಬೇತಿಗೆ ಹಾಜರಾಗಬಹುದು. ತರಬೇತಿಯ ಅವಧಿಗೆ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪ್ರೋತ್ಸಾಹ ಧನವನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-28466093 ಸಂಪರ್ಕಿಸಬಹುದಾಗಿದೆ ಎಂದು ತರಬೇತಿ ಕೇಂದ್ರದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ನೇರ ಸಂದರ್ಶನ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

ಬೆಂಗಳೂರಿನ ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ಓ.ಎಸ್.ಟಿ. ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಶುಶ್ರೂಷಕಿ/ಎ.ಎನ್.ಎಂ. ಹುದ್ದೆಗೆ ನೇಮಕಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಏಪ್ರಿಲ್ 15 ರಂದು ಬೆಳಿಗ್ಗೆ 11-00 ಗಂಟೆಗೆ ನೇರ ಸಂದರ್ಶನಕ್ಕೆ ಅಗತ್ಯ ಮೂಲ ದಾಖಲೆಗಳೊಂದಿಗೆ ವೈದ್ಯಕೀಯ ಅಧೀಕ್ಷಕರು, ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ಇಲ್ಲಿ ಸಂದರ್ಶನಕ್ಕೆ ಹಾಜರಾಗಬಹುದು.

ಬಾಬು:ಜಿಪಿಆರ್.

## ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

ಕೇಂದ್ರ ಸ್ವಾಮ್ಯದ ಕಾರ್ಖಾನೆಗಳಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ದೈನಂದಿನ ವ್ಯವಹಾರಗಳಲ್ಲಿ ಕನ್ನಡ ಅನುಷ್ಠಾನ, ಸ್ಥಳೀಯರಿಗೆ ನೇಮಕಾತಿಯಲ್ಲಿ ಉದ್ಯೋಗ ಒದಗಿಸುವ ಡಾ. ಸರೋಜಿನಿ ಮಹಿಷಿ ವರದಿ ಅನುಷ್ಠಾನ, ನಾಮಫಲಕಗಳಲ್ಲಿ ತ್ರಿಭಾಷಾ ಸೂತ್ರ ಪರಿಶೀಲಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆದ್ಯಕ್ಷ ಡಾ. ಎಲ್ ಹನುಮಂತಯ್ಯ ಅವರು ಮೈಸೂರಿನ ಕೇಂದ್ರೀಯ ಆಹಾರ ಮತ್ತು ತಾಂತ್ರಿಕ ಸಂಶೋಧನಾ ಸಂಸ್ಥೆಗೆ ಏಪ್ರಿಲ್ 13 ರಂದು ಬೆಳಿಗ್ಗೆ 11-00 ಗಂಟೆಗೆ ಭೇಟಿ ನೀಡುವರು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ಸಚಿವರ ಹಾಡಿ ವಾಸ್ತವ್ಯ

ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಏಪ್ರಿಲ್ 15 ರಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕೂವೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಹಾದೋನಿ ಪಕ್ಕದ ದನ್ನಕ್ಕಿಹಾರ ಹಲಸರ ಹಾಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಆದಿವಾಸಿ ಬುಡಕಟ್ಟು ಜನರ ಸಮಸ್ಯೆಗಳ ಸಮಲೋಚನೆ ಸಭೆ ನಡೆಸಿ, ವಿವಿಧ ಇಲಾಖೆಗಳ ಸವಲತ್ತುಗಳನ್ನು ವಿತರಿಸಿ ರಾತ್ರಿ ದನ್ನಕ್ಕಿಹಾರ ಹಲಸರ ಹಾಡಿಯಲ್ಲಿ ವಾಸ್ತವ್ಯ ಮಾಡಲಿದ್ದಾರೆ.

ಬಾಬು:ಜಿಪಿಆರ್.

## ಮೌಂಟನೇರಿಂಗ್ ತರಬೇತಿ

ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)

ಲಾಲ್‌ಬಹದ್ದೂರ್ ಮಂಟನೇರಿಂಗ್ ಇನ್‌ಸ್ಟ್ಯೂಟ್‌ವತಿಯಿಂದ ಆಯೋಜಿಸಲಾಗಿರುವ ಶಿಬಿರವು ಮೇ 1 ರಿಂದ 5 ರವರೆಗೆ ನಡೆಯುಲಿದೆ.

ಸಾಹಸ ಶಿಕ್ಷಣ ಶಿಬಿರ ಹಾಗೂ ವ್ಯಕ್ತಿ ವಿಕಸನ ಶಿಬಿರವನ್ನು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದೆ. ವಯೋಮಿತಿ 12 ವರ್ಷದಿಂದ 16 ವರ್ಷದ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ. ಅಲ್ಲದೆ ಶಾಲೆಯಲ್ಲಿ ನೋಂದಾಯಿಸಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಎಸ್.ಸಿ.ಸಿ. ಭಾರತ್ ಸೇವಾದಳ್ ಇಕೋ ಕ್ಲಬ್ ಹಾಗೂ ಶಾಲಾ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅನುಮತಿ ನೀಡಲಾಗಿದೆ.

ಶಿಬಿರವಾಸ / ಸಹಬಾಳ್ವೆ./ ಭಾವೈಕ್ಯತೆ / ನಕ್ಷೆ ಬಿಡಿಸುವುದು / ಏರೋಬಿಕ್ಸ್ / ಪಾಕಶಾಸ್ತ್ರ / ಜಾಡುಹಿಡಿ / ಚಾರಣ / ರಾಷ್ಟ್ರೀಯ ಭಾವೈಕ್ಯತೆ / ಯೋಗಾಸನ / ಪ್ರಥಮ ಚಿಕಿತ್ಸೆ ಮತ್ತು ಧ್ಯಾನ, ಇದರ ಜೊತೆ ಜೊತೆಗೆ ಸಾಹಸ ಚಟುವಟಿಕೆಗೆ ಪೂರಕವಾದ ಮನರಂಜನಾ ಕ್ರೀಡೆ ಶಿಬಿರಾಗ್ನಿ ಮತ್ತು ನಕ್ಷತ್ರ ವೀಕ್ಷಣೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಈ ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಂಜೆ 4–00 ರಿಂದ 6–00 ಗಂಟೆಯೊಳಗೆ ನಗರದ ಕಸ್ತೂರಿ ಬಾ, ರಸ್ತೆಯಲ್ಲಿರುವ ರೂಂ. ನಂ 27, ಕಂಠೀರವ ಸ್ಟೇಡಿಯಂ, ಗೇಟ್ ನಂ 11, ರಲ್ಲಿನ ಅಕಾಡೆಮಿಯನ್ನು ಅಥವಾ ದೂರವಾಣಿ ಸಂಖ್ಯೆ 9341822000 ಸಂಪರ್ಕಿಸಬಹುದಾಗಿದೆ. ಮೊದಲು ಬಂದವರಿಗೆ ಮೊದಲ ಅದ್ಯತೆಯನ್ನು ಹಾಗೂ ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳು ಪ್ರಾಶಸ್ತ್ಯ ನೀಡಲಾಗುವುದು ಎಂದು ಮೌಂಟನೇರಿಂಗ್ ತರಬೇತಿ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ಲೋಕಾಯುಕ್ತ ನ್ಯಾಯಮೂರ್ತಿಗಳ ಪ್ರವಾಸ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಡಾ. ವೈ ಭಾಸ್ಕರ ರಾವ್ ಅವರು ಏಪ್ರಿಲ್ 23 ರಂದು ರಾಮನಗರ, ಏಪ್ರಿಲ್ 24 ರಂದು ಮಂಡ್ಯ ಹಾಗೂ ಏಪ್ರಿಲ್ 25 ರಂದು ಚಾಮರಾಜನಗರ ಹಾಗೂ ಏಪ್ರಿಲ್ 30 ರಂದು ಕೊಡಗು ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು. ತಮ್ಮ ಪ್ರವಾಸದ ಅವಧಿಯಲ್ಲಿ ಸಂಬಂಧಿಸಿದ ಜಿಲ್ಲೆಗಳಲ್ಲಿ ಅಧಿಕಾರಿಗಳ ಭೇಟಿ ಮಾಡುವರಲ್ಲದೆ ಸಾರ್ವಜನಿಕರ ದೂರು ಮತ್ತು ಆಹವಾಲುಗಳನ್ನು ಸ್ವೀಕರಿಸುವರು ಎಂದು ಕರ್ನಾಟಕ ಲೋಕಾಯುಕ್ತ ಕಚೇರಿ ನಿಬಂಧಕರಾದ ಶ್ರೀ ಹೆಚ್. ಆರ್. ದೇಶಪಾಂಡೆ ತಿಳಿಸಿದ್ದಾರೆ.**

ಬಾಬು:ಜಿಪಿಆರ್.

## ಮುಖ್ಯ ಸಚೇತಕರ ಪ್ರವಾಸ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**ಕರ್ನಾಟಕ ವಿಧಾನ ಸಭೆಯ ಸರ್ಕಾರಿ ಮುಖ್ಯ ಸಚೇತಕ ಶ್ರೀ ಅಶೋಕ ಮಹಾದೇವಪ್ಪ ಪಟ್ಟಣ್, ಅವರು ಏಪ್ರಿಲ್ 11 ರಿಂದ 14 ರವರೆಗೆ ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.**

ಬಾಬು:ಜಿಪಿಆರ್.

## ಸಂಗೀತ ಪರೀಕ್ಷೆ ಅಂಕಪಟ್ಟಿ ರವಾನೆ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ 2014 ಅಕ್ಟೋಬರ್/ನವೆಂಬರ್‌ನಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಉತ್ತೀರ್ಣ ಮತ್ತು ಅನುತ್ತೀರ್ಣ ಅಂಕಪಟ್ಟಿಗಳನ್ನು ರಾಜ್ಯದ 48 ಪರೀಕ್ಷಾ ಕೇಂದ್ರಗಳೀಗೆ ರವಾನಿಸಲಾಗಿದ್ದು, ಸಂಬಂಧಪಟ್ಟ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಾಲಾ/ಸಂಸ್ಥೆಯ ಮುಖ್ಯಸ್ಥರು, ಪರೀಕ್ಷಾ ಕೇಂದ್ರ ಮುಖ್ಯಸ್ಥರನ್ನು ಸಂಪರ್ಕಿಸಿ ಅಂಕಪಟ್ಟಿಗಳನ್ನು ಪಡೆಯಬಹುದಾಗಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.**

ಬಾಬು:ಜಿಪಿಆರ್.

## ಚುನಾವಣಾ ವೀಕ್ಷಕರ ನೇಮಕ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**ಬೃಹತ್ ಬೆಂಗಳೂರು ಮಹಾನಗರಪಾಲಿಕೆ – 2015 ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಮತದಾರರ ಪಟ್ಟಿ, ಮತಗಟ್ಟೆಗಳು ಹಾಗೂ ಚುನಾವಣಾ ತರಬೇತಿ ಮುಂತಾದ ಕಾರ್ಯಗಳ ಮೇಲ್ವಿಚಾರಣೆಗಾಗಿ ಐ.ಎ.ಎಸ್. ಅಧಿಕಾರಿ ಡಾ. ಕೆ.ಜಿ ಜಗದೀಶ ಅವರನ್ನು ಚುನಾವಣಾ ವೀಕ್ಷಕರನ್ನಾಗಿ ರಾಜ್ಯ ಚುನಾವಣಾ ಆಯೋಗವು ನೇಮಿಸಿದೆ.**

ಪೂರ್ಣಿಮ:ಜಿಪಿಆರ

## ಸಾಹಿತ್ಯ ಪ್ರಶಸ್ತಿಗೆ ಶಾಂತಪ್ಪ ಶರಣಪ್ಪ ದೇವರಾಯ ಆಯ್ಕೆ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**2014 ನೇ ಸಾಲಿನ ಪ್ರೊ ಕೆ.ಜಿ. ಕುಂದಣಗಾರ ಗಡಿನಾಡ ಪ್ರಶಸ್ತಿಗೆ ಬೀದರ್ ಜಿಲ್ಲೆಯ ಶ್ರೀ ಶಾಂತಪ್ಪ ಶರಣಪ್ಪ ದೇವರಾಯ ಅವರನ್ನು ಆಯ್ಕೆ ಸರ್ಕಾರ ಆದೇಶ ಹೊರಡಿಸಿದೆ.**

**ಈ ಪ್ರಶಸ್ತಿ ಆಯ್ಕೆಗಾಗಿ ಶ್ರೀ ಕುಂ ವೀರಭದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಒಮ್ಮತದಿಂದ ಇವರನ್ನು ಆಯ್ಕೆ ಮಾಡಿದೆ.**

ಪೂರ್ಣಿಮ:ಜಿಪಿಆರ್

## ಜಕಣಾಚಾರಿ ಪ್ರಶಸ್ತಿಗೆ ಷಣ್ಮುಖಪ್ಪ ಕಾಶಪ್ಪ ಯರಕದ ಆಯ್ಕೆ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**2014 ನೇ ಸಾಲಿನ ಜಕಣಾಚಾರಿ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಶ್ರೀ ಷಣ್ಮುಖಪ್ಪ ಕಾಶಪ್ಪ ಯರಕದ ಅವರನ್ನು ಆಯ್ಕೆಮಾಡಿ ಸರ್ಕಾರ ಆದೇಶ ಹೊರಡಿಸಿದೆ.**

**ಈ ಪ್ರಶಸ್ತಿ ಆಯ್ಕೆಗಾಗಿ ಜಿ. ಬಿ. ಹಂಸಾನಂದಚಾರ್ಯ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಒಮ್ಮತದಿಂದ ಇವರನ್ನು ಆಯ್ಕೆ ಮಾಡಿದೆ.**

ಪೂರ್ಣಿಮ:ಜಿಪಿಆರ್

## ಜಾನಪದ ಶ್ರೀ ಪ್ರಶಸ್ತಿಗೆ ಕಲ್ಮನೆ ಎ.ಎಸ್. ನಂಜಪ್ಪ ಆಯ್ಕೆ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

**2014 ನೇ ಸಾಲಿನ ಜಾನಪದ ಶ್ರೀ ಪ್ರಶಸ್ತಿಗೆ ತುಮಕೂರು ಜಿಲ್ಲೆಯ ಶ್ರೀ ಕಲ್ಮನೆ ಎ.ಎಸ್. ನಂಜಪ್ಪ ಅವರನ್ನು ಆಯ್ಕೆಮಾಡಿ ಸರ್ಕಾರ ಆದೇಶ ಹೊರಡಿಸಿದೆ.**

**ಈ ಪ್ರಶಸ್ತಿ ಆಯ್ಕೆಗಾಗಿ ಡಾ. ಬಾನಂದೂರು ಕೆಂಪಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಒಮ್ಮತದಿಂದ ಇವರನ್ನು ಆಯ್ಕೆ ಮಾಡಿದೆ.**

ಪೂರ್ಣಿಮ:ಜಿಪಿಆರ್

## ಕೃಷಿ ಉತ್ಪನ್ನಗಳ ಬೆಲೆ ಸ್ಥಿರ ಹಾಗೂ ನಿರೀಕ್ಷದಾಯಕವೂ ಆಗಿರಬೇಕು– ಸಚಿವ ಕೃಷ್ಣೇಭೈರೇಗೌಡ

**ಬೆಂಗಳೂರು, ಏಪ್ರಿಲ್ 10 (ಕರ್ನಾಟಕ ವಾರ್ತೆ)**

ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ, ಆಹಾರ ಭದ್ರತಾ ಅಗತ್ಯತೆ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಮಾತ್ರವಲ್ಲದೆ, ರೈತರ ಆದಾಯ ಸುಧಾರಣೆಯೂ ಕೂಡ ಕರ್ನಾಟಕ ಕೃಷಿ ಬೆಲೆ ಆಯೋಗದ ಮುಖ್ಯ ಉದ್ದೇಶಗಳಲ್ಲೊಂದಾಗಿದೆ ಎಂದು ಕೃಷಿ ಸಚಿವರಾದ ಕೃಷ್ಣಬೈರೇಗೌಡ ಅವರು ತಿಳಿಸಿದರು.

ಅವರಿಂದು ನಗರದ ಕೃಷಿ ಇಲಾಖೆ ಆವರಣದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ರಾಜ್ಯದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕುವ ಕಾರ್ಯ ಪದ್ದತಿ ಕುರಿತ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನ್ನಾಡುತ್ತಾ, ಕೃಷಿ ಅಭಿವೃದ್ದಿಗೆ ಬೆಳೆಗಳ ಇಳುವರಿ ಅಧಿಕಗೊಳಿಸುವುದು ಮಾತ್ರವಲ್ಲದೆ, ರೈತರು ಬೆಳೆದ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಬೇಕು ಮತ್ತು ಲಾಭದಾಯಕ ಬೆಲೆಯು ಸ್ಥಿರ ಹಾಗೂ ನಿರೀಕ್ಷದಾಯಕವೂ ಆಗಿರಬೇಕು ಎಂದರು.

ಕೃಷಿ ಬೆಲೆ ಆಯೋಗ ಎಂದ ಕೂಡಲೆ ಎಲ್ಲರ ಚಿತ್ತ ಬೆಲೆ ನಿಗದಿಯತ್ತ ಸೀಮಿತವಾಗುತ್ತದೆ. ಆದರೆ ಆಯೋಗದ ಮೂಲ ಉದ್ದೇಶ ರೈತರ ಆದಾಯ ವೃದ್ದಿಯೂ ಕೂಡ ಆಗಿದೆ ಎಂದು ಅವರು ತಿಳಿಸಿದರು.

ಅಂತಾರಾಷ್ಟ್ರೀಯ ಮಟ್ಟಕ್ಕೆ ಹೋಲಿಸಿದಾಗ ನಮ್ಮ ಇಳುವರಿ ಪ್ರಮಾಣ ಶೇ.40ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆಯಿದೆ. ಇಂದಿನ ಸವಾಲು ಎದುರಿಸಲು ಹಾಗೂ ಮುಂದಿನ ಭವಿಷ್ಯದ ಸುಸ್ಥಿರತೆ

ಕಾಪಾಡಲು ಇಳುವರಿ ಸುಧಾರಣೆ ಅಗತ್ಯತೆಯನ್ನು ರೈತರಲ್ಲಿ ಮೂಡಿಸುವುದು ಅತ್ಯಗತ್ಯವಾಗಿದೆ ಎಂದ ಅವರು, ಇಳುವರಿ ಸುಧಾರಣೆ ಮಾಡದೆ ಬೆಲೆ ನಿಗದಿ ಮಾಡಿದರೆ ಸುಸ್ಥಿರತೆ ಮೂಡುವುದಿಲ್ಲ. ಈ ಕಾರಣ ನಮ್ಮ ರಾಜ್ಯದಲ್ಲಿ ಶೇ.25ರಷ್ಟು ಇಳುವರಿ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಬೆಳೆ ವೆಚ್ಚ ನಿಯಂತ್ರಣ ಮೂಲಕ ಪರ್ಯಾಯವಾಗಿ ರೈತರು ಆದಾಯ ವೃದ್ದಿಯನ್ನು ಕಾಣಬಹುದಾಗಿದೆ ಎಂದ ಸಚಿವರು, ತಾಂತ್ರಿಕತೆ ಬಳಕೆ, ಯಂತ್ರಗಳ ಬಳಕೆ ಮೂಲಕ ವೆಚ್ಚ ಕಡಿಮೆ ಮಾಡಿಕೊಳ್ಳಬಹುದಾಗಿದ್ದು, ಈ ನಿಟ್ಟಿನಲ್ಲಿ ಕೃಷಿ ಯಂತ್ರಧಾರೆ ಯೋಜನೆಯಡಿ 183 ಕಡೆ ಯಂತ್ರಗಳನ್ನು ಅತಿ ಕಡಿಮೆ ಬೆಲೆಗೆ ಬಾಡಿಗೆ ರೂಪದಲ್ಲಿ ರೈತರಿಗೆ ಒದಗಿಸುವ ಕೇಂದ್ರಗಳ್ನು 70 ಕೋಟಿ ವೆಚ್ಚದಲ್ಲಿ ತೆರೆಯಲಾಗಿದ್ದು, ಇನ್ನೂ 257 ಕಡೆ ಕೇಂದ್ರ ಪ್ರಾರಂಭಗೊಳ್ಳಲಿದೆ ಎಂದು ಸಚಿವರು ಮಾಹಿತಿ ನೀಡಿದರು.

ಮಾರುಕಟ್ಟೆಯಲ್ಲಿ ಬದಲಾವಣೆ ತರುವ ಮೂಲಕ ಗಾಹಕರು ನೀಡುವ ಹಣದ ಗರಿಷ್ಠ ಮೊತ್ತ ರೈತರಿಗೆ ಸಿಗುವಂತಾಗಬೇಕು ಎಂದ ಸಚಿವರು. ಬೆಳೆ ವಿಮೆ ಸಮರ್ಪಕ ವಿತರಣೆಯಾದಲ್ಲಿ ರೈತರಿಗೆ ಅನುಕೂಲವಾಗಲಿದ್ದು, ಒಟ್ಟಾರೆ ಈ ಮೇಲಿನ ಎಲ್ಲಾ ವಿಷಯಗಳನ್ನು ಗಮನದಲ್ಲಿರಿಲಸಿಕೊಂಡು ಬೆಲೆ ಆಯೋಗ ರಚಿಸಲಾಗಿದ್ದು, ಕೇಂದ್ರದಿಂದ ಸಹ ಸುಸ್ಥಿರವಾದ ಪರಿಹಾರಗಳು ದೊರೆತಲ್ಲಿ ರೈತರು ಉತ್ತಮ ಬೆಳೆ ವಿಧಾನಗಳನ್ನು ಅನುಸರಿಸಬಹುದಾಗಿದೆ ಎಂದು ಈ ಸಂದರ್ಭ ತಿಳಿಸಿದರು.

ಕೇಂದ್ರ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಅಧ್ಯಕ್ಷರಾಧ ಡಾ. ಅಶೋಕ್ ವಿಶಾನ್‌ದಾಸ್ ಅವರು ಮಾತನ್ನಾಡುತ್ತಾ, ಕೃಷಿ ಬೆಲೆ ಆಯೋಗ ರಚನೆಯಂತಹ ಕರ್ನಾಟಕ ಸರ್ಕಾರದ ಕ್ರಮ ಅಭಿನಂದನಾರ್ಹವಾಗಿದ್ದು, ಮುಂದಿನ ದಿನಗಳಲ್ಲಿ ಇತರೆ ರಾಜ್ಯಗಳು ಸಹ ಕರ್ನಾಟಕದ ಹೆಜ್ಜೆಯನ್ನು ಅನುಸರಿಸುವ ವಿಶ್ವಾಸ ವ್ಯಕ್ತಪಡಿಸಿದರು.

5 ದ್ವಿದಳ, 7 ಎಣ್ಣೆಕಾಳು, 4 ವಾಣಿಜ್ಯ, ಮತ್ತು 7 ಬೇಳೆಕಾಳುಗಳೂ ಸೇರಿದಂತೆ 23 ಕೃಷಿ ಬೆಳೆಗಳನ್ನು ಬೆಂಬಲ ಬೆಲೆಗೆ ಕೇಂದ್ರ ವೆಚ್ಚ ಆಯೋಗ ಪರಿಗಣಿಸಿದ್ದು, ಬೆಂಬಲ ಬೆಲೆ ಮೂಲಕ ರೈತರಿಗೆ ಸೂಕ್ತ ಬೆಳೆ ಬೆಳೆಯಲು ಉತ್ತೇಜನ ನೀಡಲಾಗುತ್ತಿದೆ ಎಂದ ಅವರು, ಬೆಳೆ ವೆಚ್ಚ ಏರಿಕೆಯಾದಲ್ಲಿ ಬೆಂಬಲ ಬೆಲೆಯ ಏರಿಕೆಯಾಗಲಿದೆ ಎಂಬ ಭಾವನೆ ಸಲ್ಲದು ಎಂದು ಅವರು ಈ ಸಂದರ್ಭ ತಿಳಿಸಿದರು.

ಹೆಚ್ಚಿನ ರಾಸಾಯನಿಕ ಬಳಕೆ ಮೂಲಕ ಕೃಷಿ ವೆಚ್ಚ ಹೆಚ್ಚುತ್ತದೆ ಎಂದ ಅವರು, ಬೆಳೆ ವೆಚ್ಚ ನಿಯಂತ್ರಣಕ್ಕೆ ರೈತರು ವೈಜ್ಞಾನಿಕ ಬೆಳೆ ಪದ್ದತಿ, ಸಮಗ್ರ ನೀರಾವರಿ ಪದ್ದತಿ ಅಳವಡಿಸಿಕೊಳ್ಳುವ ಮೂಲಕ ವೆಚ್ಚದ ಮೇಲೆ ನಿಯಂತ್ರಣ ಸಾಧಿಸಬಹದಾಗಿದೆ ಎಂದು ಸಲಹೆ ನೀಡಿದರು.

ಕೇಂದ್ರ ಬೆಲೆ ಆಯೋಗದ ಸದಸ್ಯ ಕಾರ್ಯದರ್ಶಿಗಳಾದ ಡಾ. ಶೈಲಜಾ ಶರ್ಮ ಅವರು ಉತ್ಪಾದನಾ ವೆಚ್ಚ ಕಂಡು ಹಿಡಿಯುವ ಕಾರ್ಯಪದ್ದತಿ ಬಗ್ಗೆ ಸಮಗ್ರ ಮಾಹಿತಿ ನೀಡಿದರು. "ಆಯೋಗದ ಸಂರಚನೆ ಧ್ಯೇಯೋದ್ದೇಶ ಮತ್ತು ಕಾರ್ಯ ಚಟುವಟಿಕೆ" ಕೈಪಿಡಿ ಯನ್ನು ಸಚಿವರಾದ ಕೃಷ್ಣಭೈರೇಗೌಢ ಅವರು ಈ ಸಂದರ್ಭ ಬಿಡುಗಡೆ ಮಾಡಿದರು.

ಕೃಷಿ ಇಲಾಖೆ ಕಾರ್ಯದರ್ಶಿಗಳಾದ ಉಮಾ ಮಹದೇವನ್, ಆಯುಕ್ತರಾದ ಸುಭೋಧ್ ಯಾದವ್, ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ, ಕೇಂದ್ರ ಆಯೋಗದ ಸದಸ್ಯರಾದ ರಘು, ಶಾಸಕರಾದ ಪುಟ್ಟಣ್ಣಯ್ಯ, ಅಧಿಕಾರೇತರ ಸದಸ್ಯರಾದ ಹನುಮನಗೌಡ ಬೆಳಗುರ್ಕಿ ಮುಂತಾದವರು ಉಪಸ್ಥಿತರಿದ್ದರು.

ಎಂ.ಆರ್.ಮಮತಾ